Cultivation of Forest Land according to Tangya system by ryots in Devaragudda forest of Hosadurga Taluk.

514. SRI K. VENKATARAMAIAH (Hosadurga).—Will the Minister for Food and Forests be please to state:—

(a) the number of ryots who were cultivating the forest land under Tangya system in the Devaragudda Forest, Hosadurga Taluk ;

(b) out of them, the number of ryots of Devarhatti and Gollarhatti ;

(c) the names of such ryots ;

(d) whether it has come to the notice of the Government that persons who were cultivating the land for the last 20 years, are put to hardship due to eviction ;

(e) whether it has come to the notice of the Government through the Minister for Forests had issued stay order in this respect, the ryots are being harassed by the authorities ;

(f) the number of rich people to whom forest land was granted for Cashew cultivation have grown Cashew in such lands ;

(gthe number of persons who have not grown the said crop and their names ;

(h) the action taken by the Government against the persons who have not grown the Cashew crop by violating the conditions stipulated by the Government ?

SRI G. RAME GOWDA (Minister for Food and Forests).—

(a) An extent of 100 acres of Forest Land was being cultivated by 25 ryots under Tangya system for a temporary period of one year in Devaragudda Forest of Hosadurga Taluk during 1959--60 and 1962-63 as per G.O. No. LAW 56 LG 60 dated 9-9-1960.

(b) They all belong to Devarahatti.

(c) Their names are as follows :—

(1. D. Sannahattappa (2) Thammappa (3) Sananth amma (4) Joppa (5) Parappa (6) Hallappa (7) Hatti Thammappa (8) Sannajogappa (9) Giriyappa (10) Kariyappa (11) Siddalingappa (12) Sanna thammappa (13) Dasappa (14) Gangamma (15) Giriyappa (16) Kariy amam (17) Sanneerappa (18) Sannagiriyappa (19) Rangappa (20) Dasappa (21) Siddappa (22) Sannamma (23) Holigappa (24) Sannappa (25) Ajjappa.

(d) Government did not extend the period beyond 1963-64. Hence, when it was proposed to have a Forest Development Scheme in

the said 100 acres, Sri Sannahattappa and others met Hon'ble Chief Minister, Sri D. Devaraj Urs, at Chitradurga on 29-6-1976 and submitted a representation for extending the lease period. But, their request was rejected by the Hon'ble Chief Minister and the department has taken the Forest Development work in the said 100 acres of forest land during 1976-77 by ploughing through tractors.

(e) No.

(f) No land was granted by the Government to the rich people for growing Cashew.

(g) The question of growing Cashew crop does not arise since land was not granted in the said forest.

(h) The question of taking action does not arise since land was not granted in the said forest.

ಶ್ರೀ ಕೆ. ವೆಂಕಟರಾಮಯ್ಯ.—ಸ್ವಾಮಿ, ಗೊಲ್ಲರು ಹಿಂದುಳಿದ ಪಂಗಡಕ್ಕೆ ಸೇರಿದವರಲ್ಲವೇ ? ಅಂತವರ ಕೈಯ್ಯಲ್ಲಿದ್ದ ಜಮೀನನ್ನು ತಪ್ಪಿಸುವುದು ನ್ಯಾಯವೇ ?

† ಶ್ರೀ ಜಿ. ರಾಮೇಗೌಡ.—ಆ ಜಮೀನು ಸುಗ್ರೀವಾಜ್ಞೆ ಬಂದಾಗ ಅವರ ಕೈಯ್ಯಲ್ಲಿರಲಿಲ್ಲ. ಆರಣ್ಯ ಇಲಾಖೆ ಕೈಯ್ಯಲ್ಲಿತ್ತು.

ಶ್ರೀ ಕೆ. ವೆಂಕಟರಾಮಯ್ಯ.—ಇಲ್ಲ. ಆ ಜಮೀನನ್ನು ಅವರೇ ಸಾಗುವಳಿ ಮಾಡುತ್ತಿದ್ದರು. ಅವರನ್ನು ಬಿಡಿಸುವುದಕ್ಕೆ ಹೋದಾಗ ಅವರು ಪ್ರತಿಭಟಿಸಿದ್ದಾರೆ. ಅವರ ಮೇಲೆ ಕೇಸ್ ಹಾಕಿದ್ದಾರೆ. ಜಮೀನು ಅವರ ಕೈಯ್ಯಲ್ಲಿರಲಿಲ್ಲ ಎಂದು ಹೇಳುವುದು ಸುಳ್ಳು. ಅವರ ಕೈಯ್ಯಲ್ಲೇ ಇತ್ತು. ದರೋಡೆಯಿಂದ ನಿಮ್ಮ ಅಧಿಕಾರಿಗಳು ಅವರ ಕೈತಪ್ಪಿಸಿದ್ದಾರೆ. ಹಿಂದುಳಿದಪಂಗಡದವರು ೨೦ ವರ್ಷದಿಂದ ಸಾಗುವಳಿ ಮಾಡಿಕೊಂಡು ಬಂದಿರುವವರು ಅವರು ಅಧಿಕಾರ ನಿಮ್ಮ ಕೈಯ್ಯಲ್ಲಿದೆ ಎಂದು ಅವರಿಗೆ ಈ ರೀತಿ ಅನ್ಯಾಯ ಮಾಡಿರುವುದು ನ್ಯಾಯವೇ ?

ಶ್ರೀ ಜಿ. ರಾಮೇಗೌಡ.—ಅಧಿಕಾರ ನಮ್ಮ ಕೈಯ್ಯಲ್ಲಿದೆ, ನಿಮ್ಮ ಕೈಯ್ಯಲ್ಲಿದೆ ಎಂಬುದು ಮುಖ್ಯವಾದ ಪ್ರಶ್ನೆಯಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೂ ೨೯-೬-೧೯೭೬ ರಲ್ಲಿ ಅರ್ಜಿ ಕೊಟ್ಟಾಗ ಅವರು ಹೇಳಿದ್ದಾರೆ, ಈ ಜಮೀನು ನಿಮಗೆ ಕೊಡುವುದಕ್ಕಾಗುವುದಿಲ್ಲ ಎಂದು. ಆರಣ್ಯ ಇಲಾಖೆ ಅವರಲ್ಲಿ ಈಗ ಪ್ಲಾಂಟೇಷನ್ ಬೆಳೆಸಿದೆ.

ಶ್ರೀ ಕೆ. ವೆಂಕಟರಾಮಯ್ಯ.—೧೯೭೧ ರಲ್ಲಿ ಬಗರ್‌ಹುಕುಂನಿಂದ ಸರ್ಕಾರದ ಜಮೀನನ್ನು ಸಾಗುವಳಿ ಮಾಡುತ್ತಿದ್ದರೆ ಬಡವರಾಗಿದ್ದು ಅವರು ಮೊದಲಿನಿಂದ ಸಾಗುವಳಿ ಮಾಡಿಕೊಂಡುಬಂದಿದ್ದರೆ ಅವರಿಗೇ ಮಾಡಬೇಕು ಎಂದು ಸರ್ಕಾರೀ ಆಜ್ಞೆಯೊಂದು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ರಾಮೇಗೌಡ.—ಆ ಆರ್ಡರ್ ಇರುವುದು ನಮ್ಮ ಗಮನಕ್ಕೆ ಬಂದಿಲ್ಲ. ಸುಗ್ರೀವಾಜ್ಞೆ ಹೊರಟಿರುವುದು ೧೯೭೮ ರಲ್ಲಿ. ಅದಕ್ಕೆ ಮುಂಚೆ ಈ ರೀತಿ ಆರ್ಡರ್ ಇಲ್ಲ. ಏನುದು ನನ್ನ ಅನುಭವದ ಮಾತು.

ಶ್ರೀ ಕೆ. ವೆಂಕಟರಾಮಯ್ಯ.—೧೯೭೯-೮೦ರಲ್ಲಿ ಅದು ಇತ್ತು. ಅದನ್ನು ನಿಮ್ಮ ಗಮನಕ್ಕೆ ತಂದರೆ ಜಮೀನನ್ನು ಅವರಿಗೆ ಬಿಟ್ಟುಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಹಿಂದಿನ ಆರ್ಡರ್‌ಗಳೆಲ್ಲಾ ಸುಗ್ರೀವಾಜ್ಞೆ ಹೊರಟಮೇಲೆ ವಜಾ ಆಗಿದೆ.

ಶ್ರೀ ಕೆ. ವೆಂಕಟರಾಮಯ್ಯ.—ಬಹಳ ದಿವಸದಿಂದ ಸಾಗುವಳಿ ಮಾಡುತ್ತಿದ್ದವರು ಅವರು. ಹಿಂದುಳಿದ ಪಂಗಡದವರ್ಗಕ್ಕೆ ಸೇರಿದವರು. ಆ ಜಮೀನು ಊರಿನ ಪಕ್ಕದಲ್ಲೇ ಇದ್ದು ಗ್ರಾಮಸ್ಥರಿಗೆ

ತೊಂದರೆ ಆಗತಕ್ಕ ಪರಿಸ್ಥಿತಿ ಇದೆ. ಫಾರೆಸ್ಟ್ ಜಮೀನು ಎಂಬ ನೆಪದಲ್ಲಿ ಬಡಪರ ಜಮೀನನ್ನು ಕಸಿದು ಕೊಳ್ಳುವುದು ಸರಿಯೇ ? ಈಗಲಾದರೂ ಅವರ ಜಮೀನನ್ನು ಅವರಿಗೆ ಕೊಡಿಸುತ್ತೀರಾ ?

ಶ್ರೀ ಜಿ. ರಾಮೇಗೌಡ.—ಮಹಾಸಭೆಯಲ್ಲಿ ತೀರ್ಮಾನವಾಗಿ ಆದು ಆಕ್ಟ್ ಆದಮೇಲೆ ಏನೂ ಮಾಡುವುದಕ್ಕಾಗುವುದಿಲ್ಲ. ಮಹಾಸಭೆಯಲ್ಲಿ ಏನೇನು ಚರ್ಚೆಯಾಗಬೇಕೋ ಅದೆಲ್ಲಾ ಆಗಿ ತೀರ್ಮಾನ ವಾಗಿದೆ. ಅದಕ್ಕೆ ಮಾನ್ಯ ಸದಸ್ಯರ ಒಪ್ಪಿಗೆ ಕೂಡ ಇದೆ ನಾವು ಕಾನೂನಿನಂತೆ ಹೋಗಬೇಕಾದ್ದು ಧರ್ಮ, ನ್ಯಾಯ. ಅವರು ನಿರ್ಗತಿಕರಾದರೆ ಅವರಿಗೆ ಬೇರೆ ವಿಧದಲ್ಲಿ ಜಮೀನು ಒದಗಿಸಬಹುದು. ಆ ರೀತಿ ಅವರು ಅರ್ಜಿ ಹಾಕಿಕೊಂಡರೆ ಸರ್ಕಾರ ಅದನ್ನು ಗಮನಿಸುತ್ತದೆ.

Market Cess and Sales Tax on pulses and food-grains.

614. SRI M. Y. PATIL (Afzalpur).—Will the Minister of State for Regulated Market be pleased to state :—

(a) the rate at which Market Cess and Sales-tax are levied on pulses and food-grains in the Regulated Markets in our State when compared to the rates in the Regulated Markets of the sister State of Maharashtra;

(b) whether it has come to the notice of Government that there have been adverse effects on the business of food-grains and pulses in the Regulated Markets of our State due to difference in rates;

(c) if so, the measures proposed to be taken to rectify the situation with a view to see that there would not be any adverse effects on food-grains busines in the State?

SRI A. B. JAKANUR (Minister of State for Regulated Markests).—

(a) No market cess is levied by the Regulated Markets on pulses and food-grains in Karnataka. Levy of sales-tax does not come under the provisions of KAPM(R) Act 1966.

(b) Doet not arise in view of above reply.

(c) —Do—

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷಣಿಯವರೇ, ಈಗ ಗುಲ್ಬರ್ಗ, ಬೀದರ್, ಬೆಳಗಾಂ ಮಾರುಕಟ್ಟೆಯಲ್ಲಿ ಸರ್ಕಾರದವರು ಆಹಾರಧಾನ್ಯಗಳ ಮೇಲೆ ೪ ಪರ್ಸೆಂಟ್ ತೆರಿಗೆ ವಿಧಿಸಿರುವುದರಿಂದ ಮತ್ತು ಮಾರ್ಕೆಟ್ ಫೀ ಮಹಾರಾಷ್ಟ್ರಕ್ಕಿಂತ ಹೆಚ್ಚಾಗಿರುವುದರಿಂದ ಅಲ್ಲಿನ ಧವಸಧಾನ್ಯಗಳೆಲ್ಲಾ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಗುಲ್ಬರ್ಗ, ಬೆಳಗಾಂ, ಬೀದರ್ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

†ಶ್ರೀ ಎ. ಬಿ. ಜಕನೂರ್.—ಮಾನ್ಯ ಅಧ್ಯಕ್ಷಣಿಯವರೇ, ಮಾರ್ಕೆಟ್‌ಸೆಸ್ ಆಗಲೀ, ಸೇಲ್ಸ್ ಟ್ಯಾಕ್ಸ್ ಆಗಲೀ ಆದನ್ನು ವಸೂಲು ಮಾಡುವುದು ಮಾರ್ಕೆಟ್ ಕಮಿಟಿ ಕೆಲಸ ಅಲ್ಲ. ಮಾನ್ಯ ಸದಸ್ಯರು ಬೆಳಗಾಂ, ಗುಲ್ಬರ್ಗ ಮತ್ತು ಬೀದರ್‌ನಿಂದ ಆಹಾರಧಾನ್ಯಗಳು ಮಹಾರಾಷ್ಟ್ರಕ್ಕೆ ಹೋಗುತ್ತಿದೆ ಎಂದು ಹೇಳಿದರು. ಆದು ಹೋಗುತ್ತಿರಬಹುದು. ಆದರೆ ನಮ್ಮಲ್ಲಿ ಪ್ರತಿ ವರ್ಷ ಎಷ್ಟು ಮಾಲು ಬರುತ್ತಿತ್ತೊ